ಸಾಕ್ಷಿಯನ್ನು ದಿನಾಂಕ 05-07-2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೇದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಬಿ.ಕೆ. ವಕೀಲರಿಂದಃ**

ದಾವಾ ಕೃಷಿ ಜಮೀನನ್ನು ನನ್ನ ಗಂಡ ಬಕ್ಕಪ್ಪ 1999 ನೇ ಇಸವಿಯಲ್ಲೆ 2 ಮತ್ತು 3 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾನೆ ಎನ್ನುವುದು ಸರಿಯಲ್ಲ. ಜಮೀನು ಮಾರಾಟ ಮಾಡುವಾಗ ಹಳ್ಳಿಯಲ್ಲಿರುವ ವಾಲಿಕರ್ ನೋಟಿಸು ಜಾರಿ ಮಾಡುತ್ತಾನೆ ಮತ್ತು ತಕರಾರು ಸಲ್ಲಿಸಲು ಕಾಲವಕಾಶ ಸಿಗುತ್ತದೆ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ನಾವು ಜಮೀನು ಮಾರಾಟ ಮಾಡಿಲ್ಲ ಎನ್ನುತ್ತಾರೆ. 1999 ನೇ ಇಸವಿಯಲ್ಲಿ 2 ಮತ್ತು 3 ನೇ ಪ್ರತಿವಾದಿಯರಿಗೆ ನನ್ನ ಗಂಡ ಮತ್ತು ನಾನು ಇಬ್ಬರು ಸೇರಿ 20 ರೂಪಾಯಿ ಚಾಪಾ ಕಾಗದದಲ್ಲಿ ಕ್ರಯ ಪತ್ರ ಬರೆದುಕೊಟ್ಟಿದ್ದೇವೆ ಎನ್ನುವುದು ಸುಳ್ಳು. ಸದರಿ ಪತ್ರಕ್ಕೆ ನಮ್ಮ ಊರಿನ ವಿಶ್ವನಾಥ ಪಾಟೀಲ್, ಮಾಣಿಕ ರೆಡ್ಡಿ ಮತ್ತು ಭದ್ರಪ್ಪ ಎಂಬುವವರುಸಹಿ ಮಾಡಿದ್ದಾರೆ ಎನ್ನುವುದು ಸುಳ್ಳು. ಸದರಿ ಕ್ರಯ ಪತ್ರ ಬರೆದುಕೊಟ್ಟಿರುವ ವಿಚಾರ ನನಗೆ ಗೊತ್ತಿದ್ದರು ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ದಾವಾ ಸ್ವತ್ತಿನ ಮನೆಯನ್ನು ನಾನು ಮತ್ತು ನನ್ನ ಗಂಡ 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎನ್ನುವುದು ಸುಳ್ಳು. ಸದರಿ ಮಾರಾಟದಂತೆ 4 ನೇ ಪ್ರತಿವಾದಿಯ ಹೆಸರಿಗೆ ಕಂದಾಯದ ದಾಖಲೆ ಬದಲಾವಣೆಯಾಗಿದ್ದು ಸದರಿ ಬದಲಾವಣೆಗೆ ನಾನಗಲೀ ಅಥವಾ ನನ್ನ ಗಂಡನಾಗಲಿ

ಆಕ್ಷೇಪಣೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ನಾನು ಮತ್ತು ನನ್ನ ಗಂಡ 1999 ನೆ ಇಸವಿಯಲ್ಲೆ ದಾವಾ ಸ್ವತ್ತುಗಳನ್ನು 2 ರಿಂದ 4ನೇ ಪ್ರತಿವಾದಿಯರಿಗೆ ಮಾರಾಟ ಮಾಡಿ ತುಮಕುಂಟಾದಲ್ಲಿ ಬೇರೆ ಮನೆ ಖರೀದಿ ಮಾಡಿ ಮಕ್ಕಳಿಗೆ ಮದುವೆ ಮಾಡಿದ್ದರು ಸಹ ಈಗ ಬೆಳೆದು ದೊಡ್ಡವರಾಗಿರುವ ನನ್ನ ಮಕ್ಕಳ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ನನ್ನ ಗಂಡ ಸತ್ತ ನಂತರ ಬಂದ ಹಣದಲ್ಲಿ ಮನೆ ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ನನ್ನ ಗಂಡ ಸತ್ತಾಗ ಪರಿಹಾರ ಬಂದಿದ್ದರೆ ನಾನು ತಿರುಮಲಾಪುರದಲ್ಲೆ ಮನೆ ಖರೀದಿ ಮಾಡುತ್ತಿದ್ದೆ ಎನ್ನುವುದು ಸರಿಯಲ್ಲ. ನನ್ನ ಗಂಡ ಸತ್ತು 6-7 ವರ್ಷ ಆಯಿತು. ನನ್ನ ಗಂಡ ಸತ್ತ ಒಂದು ವರ್ಷದ ನಂತರ ಪರಿಹಾರದ ಹಣ ಬಂದಿದೆ.

ನಾನು ಈಗಲೂ ತುಮಕುಂಟಾ ಗ್ರಾಮದಲ್ಲೆ ವಾಸವಿದ್ದೇನೆ ಎನ್ನುವುದು ಸರಿ. ದಾವಾ ಸ್ವತ್ತುಗಳ ಮೇಲಿನ ನನ್ನ ಅಧಿಕಾರ ಅವುಗಳನ್ನು ನಾನು ಪ್ರತಿವಾದಿಯರಿಗೆ ಮಾರಾಟ ಮಾಡಿದ ದಿನವೇ ಹೊಗಿದ್ದು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**